ರಾಜ್ಯದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಪ್ರಮಾಣಕ್ಕನುಗುಣವಾಗಿ ಪೋಲೀಸ್ ಸಿಬ್ಬಂದಿಗಳನ್ನು ಹೆಚ್ಚಿಸುವುದು

೨೮ (೪೬) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಪ್ರಮಾಣಕ್ಕನುಗುಣವಾಗಿ ಪೋಲೀಸ್ ಸಿಬ್ಬಂದಿಗಳ ಸಂಖ್ಯಾಬಲ ಅತಿ ಕಡಿಮೆ ಇರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ೧೯೫೬ರಲ್ಲಿ ಇದ್ದ ಪೋಲೀಸರ ಸಂಖ್ಯಾಬಲವು ೧೯೮೫ರಲ್ಲಿಯೂ ಮುಂದುವರೆದಿರುವುದಕ್ಕೆ ಕಾರಣಗಳೇನು ?

ಇ) ಹಾಗಿದ್ದಲ್ಲಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ರಮೇಶ ಜಿಗಜಿಣಗಿ (ಗೃಹ ರಾಜ್ಯ ಮಂತ್ರಿಗಳು).—

ಅ) ಜನಸಂಖ್ಯೆಯ ಅನುಗುಣವಾಗಿಯೇ ಪೋಲೀಸ್ ಸಿಬ್ಬಂದಿಯನ್ನು ನೇಮಿಸಬೇಕೆಂಬ ನಿಯಮ ಇಲ್ಲ. ಪೋಲೀಸ್ ಸಿಬ್ಬಂದಿಯ ನೇಮಕವನ್ನು ಕಾನೂನು ಮತ್ತು ಶಾಂತಿಪಾಲನೆಯ ಆವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತದೆ.

ಆ) ೧೯೫೬ರಲ್ಲಿ ಇದ್ದ ಪೋಲೀಸರ ಸಂಖ್ಯಾಬಲವನ್ನು ೧೯೮೫ರಲ್ಲಿ ಮುಂದುವರಿಸಿಲ್ಲ. ಆದರೆ ಆಗಿಂದಾಗ್ಗೆ ಪೋಲೀಸರ ಸಂಖ್ಯಾಬಲವನ್ನು ಹೆಚ್ಚಿಸುತ್ತಾ ಬಂದಿದೆ.

ಇ) ಆವಶ್ಯಕವನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಗುಳೇದಗುಡ್ಡ ಸಾರ್ವತ್ರಿಕ ಆಸ್ಪತ್ರೆಗೆ ಮಹಿಳಾ ವೈದ್ಯಾಧಿಕಾರಿ ನೇಮಕ ಮಾಡುವುದು

೨೯ (೧೯೧) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).— ಮಾನ್ಯ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಗುಳೇದಗುಡ್ಡ ಸಾರ್ವತ್ರಿಕ ಆಸ್ಪತ್ರೆಯಲ್ಲಿ ಸುಮಾರು ಎರಡು ವರ್ಷಗಳಿಂದ ಮಹಿಳಾ ವೈದ್ಯಾಧಿಕಾರಿಯು ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಖಾಲಿಯಿರುವ ಮಹಿಳಾ ವೈದ್ಯಾಧಿಕಾರಿ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ನಿಯೋಜಿಸಿರುವ ಮಹಿಳಾ ವೈದ್ಯರುಗಳು ಫೆಬ್ರುವರಿ ತಿಂಗಳೊಳಗೆ ಪಾಸಾಸ್ಸು ಬಂದನಂತರ ಆ ಹುದ್ದೆಯನ್ನು ಭರ್ತಿ ಮಾಡಲಾಗುವುದು.

ಹಂನಗುಂದ ತಾಲ್ಲೂಕಿನ ಅಮೀನಗಡ ನಗರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವುದು

೩೦ (೨೮) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಗುಳೆ ದಗುಡ್ಡ ಕ್ಷೇತ್ರದ ಹುನಗುಂದ ತಾಲ್ಲೂಕಿನ ಅಮೀನಗಡ ನಗರ ಪಂಚಾಯಿತಿಯವರಿಂದ ರಾಜ್ಯ ಸರ್ಕಾರವು ೧೯೮೦ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲು ೨೫,೦೦,೦೦ ರೂಪಾಯಿ ಭರ್ತಿ ಮಾಡಿಸಿಕೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆದರ ವಿವರಗಳೇನು? ಮತ್ತು ಸದರಿ ಆರೋಗ್ಯ ಕೇಂದ್ರವನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು):—

ಅ) ಹೌದು.

ಆ) ಅಮೀನಗಡ ಗ್ರಾಮಸ್ಥರು ಬಾಗಲಕೋಟೆಯಲ್ಲಿರುವ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ೨೫,೩೦೦.೮೦ ರೂಪಾಯಿಗಳನ್ನು ದಿನಾಂಕ ೨೨-೧೨-೧೯೮೩ರಂದು ಪ್ರಾಥಮಿಕ ಆರೋಗ್ಯ ಘಟಕದ ಮಂಜೂರಾತಿ ಸಲುವಾಗಿ ಕಟ್ಟಿರುತ್ತಾರೆ. ಅಮೀನಗಡ ಗ್ರಾಮವು ಪ್ರಾಥಮಿಕ ಆರೋಗ್ಯ ಕೇಂದ್ರ, ಸೂಳೇಬಾವಿಯಿಂದ ೩/೪ ಕಿ.ಮೀ. ದೂರದಲ್ಲಿರುತ್ತದೆ. ಆದುದರಿಂದ ಈ ಹಳ್ಳಿಗೆ ಪ್ರಾಥಮಿಕ ಘಟಕ ಮಂಜೂರು ಮಾಡಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ೧೯೬೬ನೇ ಇಸವಿಯ ಕರ್ನಾಟಕ ಸೆಕೆಂಡರಿ ಶಿಕ್ಷಣ ಪರೀಕ್ಷಾ ಮಂಡಲಿ ಶಾಸನದ ೨೫ (೩)ನೇ ಕಲಮಿನ ಮೇರೆಗೆ ಹೊರಡಿಸಲಾದ ಕರ್ನಾಟಕ ಸೆಕೆಂಡರಿ ಶಿಕ್ಷಣ ಪರೀಕ್ಷಾ ಮಂಡಲಿಯ ೧೯೮೨-೮೩ನೇ ಸಾಲಿನ ವಾರ್ಷಿಕ ಆಡಳಿತಾತ್ಮಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ. ಈಗ ನಿಯಮ ೩೩ಳಿನ್ನು ತೆಗೆದುಕೊಳ್ಳೋಣ.

ನಿಯಮ ೩೩ಳಿರ ಮೇರೆಗೆ

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಿಯಮ ೩೩ಳಿನ್ನು ತೆಗೆದುಕೊಳ್ಳುವ ಬದಲು ನಮ್ಮ ಸದಸ್ಯರು ಆತಂಕ ವ್ಯಕ್ತಪಡಿಸುವುದೇನೆಂದರೆ ತಾವು ಬಹಳ ಕಟ್ಟುನಿಟ್ಟಾಗಿ ಪ್ರಶ್ನೋತ್ತರ ವೇಳೆ ಮುಗಿಯಿತು ಎಂದು ಒಂದು ನಿಮಿಷ ಇರುವಾಗಲೇ ತಾವು ಹೇಳಿಬಿಟ್ಟಿರಿ. ನನ್ನ ಗಡಿಯಾರದ ಪ್ರಕಾರ ಇನ್ನೂ ಒಂದು ನಿಮಿಷ ಇತ್ತು. ತಾವು ಇಷ್ಟುಬೇಗನೆ ನಿಲ್ಲಿಸಿಬಿಟ್ಟರೆ ಸದಸ್ಯರಿಗೆ ಬಹಳ ತೊಂದರೆ ಯಾಗುತ್ತದೆ. ಸದಸ್ಯರ ನ್ಯೂನತೆಗಳನ್ನು ತಾವು ಗಮನಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ತಮ್ಮ ತೀರ್ಮಾನಕ್ಕೆ ಬದ್ಧನಾಗಿದ್ದೇನೆ. ಕೆಲವಾರು ವಿಷಯಗಳಿಗೆ ಜಾಸ್ತಿ ಅವಕಾಶ ಸಿಕ್ಕಿರುವುದರಿಂದ ಮತ್ತೆ ಕೆಲವಾರು ವಿಷಯಗಳಿಗೆ ಅವಕಾಶ ಸಿಕ್ಕದೆ ಇರಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.— ಆದನ್ನು ಸರಿಯಾದ ರೀತಿಯಲ್ಲಿ ರೆಗ್ಯುಲೇಟ್ ಮಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ರೆಗ್ಯುಲೇಟ್ ಮಾಡಿ ಅವಕಾಶ ಕೊಡಿ, ಆತಂಕ ಇರುವುದಿಲ್ಲ.

ಅಧ್ಯಕ್ಷರು.— ಕೆಲವು ಸಾರಿ ಮುಖ್ಯವಾದ ಪ್ರಶ್ನೆಗಳು ಬಂದಾಗ ಎಲ್ಲರೂ ಅದರ ಮೇಲೆ ಉಪ ಪ್ರಶ್ನೆಗಳನ್ನು ಹಾಕುವುದು ವಾಡಿಕೆ ಇರುತ್ತದೆ. ಇವತ್ತು ಒಂದು ಪ್ರಶ್ನೆ ಸುಮಾರು ೨೨ ನಿಮಿಷಗಳು ತೆಗೆದುಕೊಂಡಿರುತ್ತದೆ. ಹೀಗಾಗುವುದರಿಂದ ಸ್ವಲ್ಪಮಟ್ಟಿಗೆ ತೊಂದರೆಯಾಗುವ ಸಂಭವವಿರುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.— ಬಹಳ ಪ್ರಮುಖವಾದ ಪ್ರಶ್ನೆಗಳನ್ನು ಕೇಳುವಾಗ ಸಾಕಷ್ಟು ಕಾಲಾವಕಾಶವನ್ನು ಕೊಡಬೇಕೆಂಬುದು ನಮ್ಮ ಆತಂಕವಾಗಿರುತ್ತದೆ. ಆದ್ದರಿಂದ ತಮ್ಮನ್ನು ಕೇಳಿಕೊಳ್ಳುವುದು ಇಷ್ಟೆ. ೫-೧೦ ನಿಮಿಷಗಳು ಜಾಸ್ತಿ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ ತಮ್ಮನ್ನು ಕೇಳಿಕೊಳ್ಳುವುದು ಇಷ್ಟೇ...

ಅಧ್ಯಕ್ಷರು.— ತಾವು ಕೂಡ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಸದಸ್ಯರಾಗಿದ್ದೀರಿ. ಅದರಲ್ಲಿ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪಮೊಯಿ.— ಬಿಸಿನೆಸ್ ಅಡ್ವೈಸರಿ ಕಮಿಟಿಯ ಮುಂದೆ ಇದು ಬರಬೇಕಾದ ಅವಶ್ಯಕತೆ ಇಲ್ಲ. ಪ್ರಶ್ನೋತ್ತರಗಳಿಗೆ ಒಂದು ಗಂಟೆಯ ಕಾಲಾವಕಾಶ ಇರುವುದು ಎಲ್ಲರಿಗೂ ತಿಳಿದಂಥ